# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 683 (804) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮಂಡ್ಯ, ಮೈಸೂರು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನ ಪಡಿಸುತ್ತಿರುವ ಜಮೀನಿನ ಸಂಖ್ಯೆ ಎಷ್ಟು; (ಜಿಲ್ಲೆ, ತಾಲ್ಲೂಕು, ಗ್ರಾಮಗಳು, ವಿಸ್ತೀರ್ಣವಾರು ಮಾಹಿತಿ ನೀಡುವುದು); | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸುತ್ತಿರುವ ಜಮೀನಿನ ಜಿಲ್ಲೆ, ತಾಲ್ಲೂಕು, ಗ್ರಾಮಗಳು, ವಿಸ್ತೀರ್ಣವಾರು ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಿದೆ.<br><br>ಮುಂದುವರೆದು, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಪ್ರಸ್ತುತ ಯಾವುದೇ ಹೊಸ ಕೈಗಾರಿಕಾ ಪ್ರದೇಶಗಳಿಗೆ ಜಮೀನು ಭೂಸ್ವಾಧೀನ ಪ್ರಕ್ರಿಯೆ ಚಾಲ್ತಿಯಲ್ಲಿರುವುದಿಲ್ಲ. |
| ಆ | ಈ ಪೈಕಿ ಎಲ್ಲೆಲ್ಲಿ ರೈತರ ವಿರೋಧ ವ್ಯಕ್ತವಾಗಿತ್ತು; ಅಂತಿಮ ಅಧಿಸೂಚನೆ ಹೊರಡಿಸಿ ಪರಿಹಾರ ಪಾವತಿ ಹಾಗೂ ವಿಚಾರಣೆ & ಜಂಟಿ ಅಳತೆ ಕಾರ್ಯ ಪ್ರಗತಿಯಲ್ಲಿದೆ; (ಜಿಲ್ಲಾವಾರು, ಯೋಜನೆವಾರು ಸಂಪೂರ್ಣ ಮಾಹಿತಿ ನೀಡುವುದು); | **ಮೈಸೂರು ಜಿಲ್ಲೆ:**<br><br>➢ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಆಯಿರಹಳ್ಳಿ, ಸೋಮೇಶ್ವರಪುರ ಮತ್ತು ನಂಜನಗೂಡು ತಾಲ್ಲೂಕು, ಹದಿನಾರು ಗ್ರಾಮಗಳಲ್ಲಿ ಒಟ್ಟು 632-34 ಎಕರೆ ಜಮೀನುಗಳಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದಲೂ ಗ್ರಾಮಸ್ಥರು ಮತ್ತು ರೈತರು/ಅಧಿಸೂಚಿತ ಖಾತೆದಾರರು ಭೂಸ್ವಾಧೀನಕ್ಕೆ ತಡೆ ಒಡ್ಡಿದ್ದು, ಸರ್ವೆ ಸಿಬ್ಬಂದಿ ಸ್ಥಳಕ್ಕೆ ಹಾಜರಾಗಲು ಪ್ರತಿರೋಧ ವ್ಯಕ್ತಪಡಿಸಿರುವುದರಿಂದ ಜೆ.ಎಂ.ಸಿ. ಕಾರ್ಯ ನಡೆಸಲು ಸಾಧ್ಯವಾಗಿಲ್ಲದ ಕಾರಣ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ.<br><br>➢ ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಡಕೊಳ ಗ್ರಾಮದ 13-32 ಎಕರೆ ಜಮೀನಿಗೆ ಜೆ.ಎಂ.ಸಿ. ಕಾರ್ಯ ಪ್ರಗತಿಯಲ್ಲಿರುವುದರಿಂದ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ.<br><br>**ಮಂಡ್ಯ ಜಿಲ್ಲೆ:**<br><br>➢ ಮಂಡ್ಯ ಜಿಲ್ಲೆ, ನಾಗಮಂಗಲ ತಾಲ್ಲೂಕು, ಚೆನ್ನಾಪುರ, ಬೀಚನಹಳ್ಳಿ, ಹಟ್ನ ಮತ್ತು ಬಿಳಗುಂದ ಗ್ರಾಮಗಳಲ್ಲಿ ಒಟ್ಟು 1277-02½ ಎಕರೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದಲೂ ರೈತರು / ಅಧಿಸೂಚಿತ ಖಾತೆದಾರರು ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಜೆ.ಎಂ.ಸಿ. ಕಾರ್ಯ ಕೈಗೊಳ್ಳಲು ಸಾಧ್ಯವಾಗದೇ ಇರುವುದರಿಂದ ಅಂತಿಮ ಅಧಿಸೂಚನೆ ಹೊರಡಿಸಲಾಗಿರುವುದಿಲ್ಲ. |

| | | |
|---|---|---|
| | | ➢ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕುದರಗುಂಡಿ, ಗೆಜ್ಜಲಗೆರೆ ಮತ್ತು ಗೊರವನಹಳ್ಳಿ ಗ್ರಾಮದ 4-37 ಎಕರೆ ಹಾಗೂ ಮಂಡ್ಯ ಜಿಲ್ಲೆ, ಮಂಡ್ಯ ತಾಲ್ಲೂಕು, ನೊದೆಕೊಪ್ಪಲು ಗ್ರಾಮದ 284-25½ ಎಕರೆ ಜಮೀನಿನ ಭೂಸ್ವಾಧೀನಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ, ಜೆ.ಎಂ.ಸಿ. ಕಾರ್ಯ ಕೈಗೊಳ್ಳಲು ಸಾಧ್ಯವಾಗದೇ ಇರುವುದರಿಂದ ಅಂತಿಮ ಅಧಿಸೂಚನೆ ಹೊರಡಿಸಲಾಗಿರುವುದಿಲ್ಲ.<br>➢ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಕುದರಗುಂಡಿ ಗ್ರಾಮದಲ್ಲಿ 109-00 ಎಕರೆ ಜಮೀನಿಗೆ ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದ್ದು, ರೈತರು ವಿರೋಧ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿರುವ ಹಿನ್ನಲೆಯಲ್ಲಿ ಸ್ವಾಧೀನ ಪ್ರಕ್ರಿಯೆ ಮುಂದುವರೆಸಲು ಸಾಧ್ಯವಾಗಿರುವುದಿಲ್ಲ. |
| ಇ | ಸದರಿ ಕೈಗಾರಿಕಾ ಪ್ರದೇಶದ ಅಭಿವೃದ್ಧಿಯಿಂದಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ನೀಡುವ ಪರಿಹಾರವೇನು; | ಕೆಐಎಡಿಬಿ ವತಿಯಿಂದ ಕೆಐಎಡಿ ಕಾಯ್ದೆ ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಿ ಸ್ವಾಧೀನಪಡಿಸಿಕೊಂಡ ಜಮೀನಿಗೆ ದರ ನಿಗದಿಪಡಿಸುವ ಸಲುವಾಗಿ ಸಂಬಂಧಪಟ್ಟ ಜಿಲ್ಲಾಧಿಕಾರಿ / ಮಂಡಳಿಯ ವಿಶೇಷ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಜರುಗುವ ಭೂದರ ನಿರ್ಧರಣಾ ಸಲಹಾ ಸಮಿತಿ ಸಭೆಯಲ್ಲಿ ಭೂಮಾಲೀಕರೊಂದಿಗೆ ಸಮಾಲೋಚಿಸಿ ಪ್ರಸ್ತಾವಿತ ಪ್ರದೇಶದಲ್ಲಿನ ಮಾರ್ಗಸೂಚಿ ದರ ಮತ್ತು ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಹಿಂದಿನ 3 ವರ್ಷಗಳ ಮಾರಾಟದ ಅಂಕಿ-ಅಂಶಗಳನ್ನು ಪರಿಗಣಿಸಿ ಶಿಫಾರಸ್ಸು ಮಾಡುವ ದರಕ್ಕೆ ಮಂಡಳಿ ಸಭೆಯ ಅನುಮೋದನೆ ಪಡೆದು ನಿಯಮಾನುಸಾರ ಪರಿಹಾರ ಪಾವತಿಸಲು ಕ್ರಮ ವಹಿಸಲಾಗುತ್ತದೆ. |
| ಈ | ಸದರಿ ಕೈಗಾರಿಕಾ ಪ್ರದೇಶಾಭಿವೃದ್ಧಿಯಿಂದ ಎಷ್ಟು ಜನರಿಗೆ ಉದ್ಯೋಗ ದೊರೆಯುವ ನಿರೀಕ್ಷೆಯನ್ನು ಹೊಂದಾಗಿದೆ ಹಾಗೂ ಯಾವ ಅವಧಿಯೊಳಗೆ ಪೂರ್ಣಗೊಳಿಸಲಾಗುವುದು? | ಸದರಿ ಜಮೀನುಗಳ ಭೂಸ್ವಾಧೀನ ಕ್ರಮ ಪೂರ್ಣಗೊಂಡ ನಂತರ ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ. ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದ ಮೇಲೆ ಯೋಜನಾ ಅನುಮೋದನಾ ಸಮಿತಿಗಳಾದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ ಸಭೆ/ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ/ಜಿಲ್ಲಾ ಮಟ್ಟದ ಏಕಗವಾಕ್ಷಿ ಸಮಿತಿ ಸಭೆಗಳಲ್ಲಿ ಯೋಜನೆ ಅನುಮೋದನೆಗೊಂಡ ನಂತರ ಜಮೀನು ಹಂಚಿಕೆ ಮಾಡಲಾಗುತ್ತದೆ. ಹಂಚಿಕೆ ಪಡೆದ ಉದ್ದಿಮೆದಾರರು ಯೋಜನೆ ಅನುಷ್ಠಾನಗೊಳಿಸಿದ ಮೇಲೆ ಉದ್ಯೋಗ ಸೃಷ್ಟಿಯಾಗುತ್ತದೆ. |

**ಸಂಖ್ಯೆ: ಸಿಐ 125 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

# ಕೆಐಎಡಿಬಿ, ವಲಯ ಕಛೇರಿ, ಮೈಸೂರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಕೈಗಾರಿಕಾ ಪ್ರದೇಶಕ್ಕಾಗಿ ಸ್ವಾಧೀನಪಡಿಸುತ್ತಿರುವ ಜಮೀನಿನ ವಿವರಗಳ ತಃಖ್ತೆ. (ಅನುಬಂಧ-1)

## ಮೈಸೂರು ಜಿಲ್ಲೆ:-

| ಕ್ರ. ಸಂ. | ಏಕಘಟಕ ಸಂಕೀರ್ಣ / ಕೈಗಾರಿಕಾ ಪ್ರದೇಶದ ಹೆಸರು | ಜಿಲ್ಲೆ / ತಾಲ್ಲೂಕು | ಗ್ರಾಮ | ಕಲಂ 28(1) ರ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ವಿಸ್ತೀರ್ಣ ಎ-ಗು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕೈಗಾರಿಕಾ ಪ್ರದೇಶ | ಮೈಸೂರು / ಮೈಸೂರು & ಮೈಸೂರು / ನಂಜನಗೂಡು | ಅಯರಹಳ್ಳಿ ಸೋಮೇಶ್ವರಪುರ ಹದಿನಾರು ಅಡಕನಹಳ್ಳಿ | ಸಿಐ 112 ಎಸ್‌ಪಿಕ್ಯೂ (ಇ) 2022 ದಿ: 02-06-2022 | 122-36<br>170-10<br>325-33<br>13-35<br>632-34 | ಅಯರಹಳ್ಳಿ, ಸೋಮೇಶ್ವರಪುರ, ಹದಿನಾರು ಗ್ರಾಮಗಳ ಜೆ.ಎಂ.ಸಿ. ಕಾರ್ಯ ನಡೆಸಲು ಸಾಧ್ಯವಾಗಿಲ್ಲ. ಗ್ರಾಮಸ್ಥರು ಮತ್ತು ರೈತರು ಭೂಸ್ವಾಧೀನಕ್ಕೆ ತಡೆ ಒಡ್ಡಿದ್ದು, ಸರ್ವೆ ಸಿಬ್ಬಂದಿ ಸ್ಥಳಕ್ಕೆ ಹಾಜರಾಗಲು ಪ್ರತಿರೋಧ ವ್ಯಕ್ತಪಡಿಸಿರುವುದರಿಂದ ಅಂತಿಮ ಅಧಿಸೂಚನೆ ಹೊರಡಿಸಲು ಹೊರಡಿಸಿರುವುದಿಲ್ಲ. |
| 2 | ಕೈಗಾರಿಕಾ ಪ್ರದೇಶ | ಮೈಸೂರು / ಮೈಸೂರು | ಕಡಕೊಳ | ಸಿಐ 213 ಎಸ್‌ಪಿಕ್ಯೂ (ಇ) 2022 ದಿನಾಂಕ: 11-08-2022 | 13-32 | ಜೆ.ಎಂ.ಸಿ. ಕಾರ್ಯ ಪ್ರಗತಿಯಲ್ಲಿರುವುದರಿಂದ ಅಂತಿಮ ಅಧಿಸೂಚನೆ ಹೊರಡಿಸಿರುವುದಿಲ್ಲ. |
| | | | ಒಟ್ಟು | | 646-26 | |

## ಹಾಸನ ಜಿಲ್ಲೆ:-

| ಕ್ರ. ಸಂ. | ಏಕಘಟಕ ಸಂಕೀರ್ಣ / ಕೈಗಾರಿಕಾ ಪ್ರದೇಶದ ಹೆಸರು | ಜಿಲ್ಲೆ / ತಾಲ್ಲೂಕು | ಗ್ರಾಮ | ಕಲಂ 28(1) ರ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ವಿಸ್ತೀರ್ಣ ಎ-ಗು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಪ್ರಸ್ತುತ ಈ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಗಾಗಿ ಹೊಸದಾಗಿ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ಇರುವುದಿಲ್ಲ. | | | | | |

## ಚಾಮರಾಜನಗರ ಜಿಲ್ಲೆ:-

| ಕ್ರ. ಸಂ. | ಏಕಘಟಕ ಸಂಕೀರ್ಣ / ಕೈಗಾರಿಕಾ ಪ್ರದೇಶದ ಹೆಸರು | ಜಿಲ್ಲೆ / ತಾಲ್ಲೂಕು | ಗ್ರಾಮ | ಕಲಂ 28(1) ರ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ವಿಸ್ತೀರ್ಣ ಎ-ಗು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಪ್ರಸ್ತುತ ಈ ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಗಾಗಿ ಹೊಸದಾಗಿ ಯಾವುದೇ ಭೂಸ್ವಾಧೀನ ಪ್ರಕ್ರಿಯೆ ಇರುವುದಿಲ್ಲ. | | | | | |

## ಮಂಡ್ಯ ಜಿಲ್ಲೆ:-

| ಕ್ರ. ಸಂ. | ವಸಾಹತು ಸಂಕೀರ್ಣ / ಕೈಗಾರಿಕಾ ಪ್ರದೇಶದ ಹೆಸರು | ಜಿಲ್ಲೆ / ತಾಲ್ಲೂಕು | ಗ್ರಾಮ | ಕಲಂ 28(1) ರ ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ವಿಸ್ತೀರ್ಣ ಎ-ಗು | ಷರಾ |
|---|---|---|---|---|---|---|
| 1 | 2 | 3 | 4 | 5 | 6 | 7 |
| 1 | ಕೈಗಾರಿಕಾ ಪ್ರದೇಶ | ಮಂಡ್ಯ / ನಾಗಮಂಗಲ | ಚಿನ್ನಾಪುರ, ಬೀಚನಹಳ್ಳಿ, ಹಟ್ನ, ಬೀಳಗುಂದ | ಸಿಐ 96 ಎಸ್‌ಪಿಕ್ಯೂ (ಇ) 2019 ದಿನಾಂಕ: 14-08-2020 | 14-08<br>271-39<br>429-27<br>561-08 ½<br>1,277-02 ½ | ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ದಿನಾಂಕದಿಂದಲೂ ರೈತರು / ಅಧಿಸೂಚಿತ ಖಾತೆದಾರರು ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡುವಂತೆ ಕೋರಿ ಮುಷ್ಕರ ನಡೆಸುತ್ತಿದ್ದು, ಜೆ.ಎಂ.ಸಿ. ಕಾರ್ಯಕೈಗೊಳ್ಳಲು ಬಿಡುತ್ತಿಲ್ಲ / ಸಹಕಾರ ನೀಡುತ್ತಿಲ್ಲ. ಆದ್ದರಿಂದ ಅಂತಿಮ ಅಧಿಸೂಚನೆ ಹೊರಡಿಸಲು ಸಾಧ್ಯವಾಗಿರುವುದಿಲ್ಲ. ಪ್ರತಿದಿನವು ಕೂಡಾ ಅಲ್ಲಿ ಮುಷ್ಕರ ನಡೆಯುತ್ತಲಿದೆ. |
| 2 | ಕೈಗಾರಿಕಾ ಪ್ರದೇಶ ಸಂಪರ್ಕ ರಸ್ತೆಗಾಗಿ | ಮಂಡ್ಯ/ ಮದ್ದೂರು | ಕುದುರಗುಂಡಿ ಗೆಜ್ಜಲಗೆರೆ ಗೊರವನಹಳ್ಳಿ | ಸಿಐ 100 ಎಸ್‌ಪಿಕ್ಯೂ (ಇ) 2019 ದಿನಾಂಕ: 12-01-2022 | 4-37 | ಕಲಂ 28(3)ರ ಆದೇಶ ಹೊರಡಿಸಲಾಗಿದ್ದು, ಜೆ.ಎಂ.ಸಿ. ಕಾರ್ಯ ಪ್ರಗತಿಯಲ್ಲಿದೆ. |
| 3 | ಕೈಗಾರಿಕಾ ಪ್ರದೇಶ | ಮಂಡ್ಯ / ಮಂಡ್ಯ | ಸೋದೇಕೊಪ್ಪಲು | ಸಿಐ 16 ಎಸ್‌ಪಿಕ್ಯೂ (ಇ) 2022 ದಿನಾಂಕ: 28-01-2022 | 284-25 ½ | ಕಲಂ 28(3)ರ ಆದೇಶ ಹೊರಡಿಸಲಾಗಿದ್ದು, ಜೆ.ಎಂ.ಸಿ. ಕಾರ್ಯ ಪ್ರಗತಿಯಲ್ಲಿದೆ. |
| | | | ಒಟ್ಟು | | 1,566-25 | |

## ಘೋಷ್ವಾರೆ

| ಕ್ರ. ಸಂ. | ಜಿಲ್ಲೆಯ ಹೆಸರು | ಸ್ವಾಧೀನಪಡಿಸುತ್ತಿರುವ ವಿಸ್ತೀರ್ಣ ಎ-ಗು |
|---|---|---|
| 1 | ಮೈಸೂರು | 646-26 |
| 2 | ಮಂಡ್ಯ | 1,566-25 |
| | ಒಟ್ಟು | 2,213-11 |

ವಿಶೇಷ ಭೂಸ್ವಾಧೀನಾಧಿಕಾರಿ
ಕಕೈಪ್ರಮಂ, ವಲಯ ಕಛೇರಿ, ಮೈಸೂರು.